ಬಂದಿದ್ದಾರೆ ಅಂದರೆ ಏನಾಯಿತೋ ಎಂಬ ಆತಂಕವೂ ಆಯಿತು. ಅಂಗಳಕ್ಕೆ ಅವನು ಬಂದಕೂಡಲೆ, "ಏನಿವತ್ತು ಬೇಗ ಬಂದಿದ್ದು? ಸಂತೆಗೆ ಹೋಗಿಲ್ಲವಾ?" ಎಂದು ಕೇಳಿದ್ದೇ ಬೀರ ಕೋಪದಿಂದ, "ರಂಡೇಮಕ್ಕಳು... ಒಂದಿನ ಇವರನ್ನೆಲ್ಲ ಕೊಚ್ಚಿ ಹಾಕ್ತೀನಿ" ಎಂದು ಕೂಗಿದ. ಇವರನ್ನೆಲ್ಲ ಅಂದರೆ ಯಾರೆಂದು ತಿಳಿಯದೆ ಈರಿ ಗಾಬರಿಗೊಂಡಳು.

"ಅಂಥದ್ದೇನಾಯಿತು?'' ಎಂದು ಆತಂಕದಿಂದ ಕೇಳಿದ ಅವಳ ಮಾತನ್ನು ಬೀರ ಗಮನಿಸದೆ, ''ದುಡ್ಡು ಎಲ್ಲಿಟ್ಟಿದೀಯಾ? ಸಂತೆಗೆ ಹೋಗ್ಬೇಕು. ಗೌಡ್ರು ವಾರದ ಕೂಲಿ ಕೊಡ್ಲಿಲ್ಲ'' ಎಂದ. ಅವನು ಕುಡಿಯದೆ ಬೇಗ ಬಂದಿದ್ದರ ಕಾರಣ ಈರಿಗೆ ಹೊಳೆಯಿತು. ನನ್ನ ಹತ್ರ ದುಡ್ಡೆಲ್ಲಿದೆ ಎಂದು ಅವಳು ಹೇಳಿದ ಮಾತು ಕಿವಿಗೆ ಹಾಕಿಕೊಳ್ಳದೆ ಬೀರ ಒಳಗೆ ನುಗ್ಗಿ ಅಲ್ಲಿದ್ದ ನಾಕಾರು ಹಳೆಯ ಡಬ್ಬಗಳಲ್ಲಿ ಹುಡುಕಲು ಶುರುಮಾಡಿದ. ಗೌಡರ ಮನೆಯ ಕೆಲಸದ ಜೊತೆಗೇ ಊರಿನ ಉಳಿದವರ ಮನೆಯ ಅಡಿಕೆ ಸುಲಿಯುವುದು, ತೋಟದ ಕೆಲಸ ಮಾಡುವುದು ಇತ್ಯಾದಿಗಳಲ್ಲಿ ದುಡಿದದ್ದನ್ನು ಈರಿ ಬೇರೆಲ್ಲೂ ಇಡಲು ಜಾಗವಿಲ್ಲದೆ ಡಬ್ಬದಲ್ಲಿ ಇಡುವ ಸಂಗತಿಯನ್ನು ಹ್ಯಾಗೋ ಬೀರ ತಿಳಿದುಬಿಟ್ಟಿದ್ದ. ಈರಿ ಇರೋ ದುಡ್ಡೆಲ್ಲ ಇವನಿನ್ನು ತಗೋತಾನೆ ಅಂತ ಗಾಬರಿಯಿಂದ ಎದ್ದು ಅವನನ್ನು ತಡೆಯಲು ಬಂದಳು. ಬೀರ ಅವಳನ್ನು ದೂಡಿದ. ಅನಿರೀಕ್ಷಿತವಾಗಿದ್ದರಿಂದ ಈರಿ ಹಿಮ್ಮುಖ ಬಿದ್ದಳು. ಅವಳ ತಲೆ ಗೋಡೆಗೆ ಬಡಿದು ಕಣ್ಣು ಕತ್ತಲೆ ಬಂದು ಅಲ್ಲೇ ಒರಗಿದಳು. ಬೀರ ಅದರ ಬಗ್ಗೆ ಗಮನ ಕೊಡದೆ, ದುಡ್ಡನ್ನೆಲ್ಲ ಈರಿ ಇಟ್ಟಿದ್ದ ಯಾವುದೋ ಡಬ್ಬದಿಂದ ತೆಗೆದು ಎಷ್ಟಿದೆ ಎಂಬುದನ್ನೂ ಗಮನಿಸದೆ ಅಷ್ಟನ್ನೂ ಜೇಬಿಗೆ ತುರುಕುತ್ತಾ ಇಷ್ಟು ದುಡ್ಡಿದ್ದಾಗ ಶೆಟ್ಟಿ ಯಾಕೆ ಬೇಕು? ಚಿನ್ನೂರಲ್ಲಿ ಹೆಂಡದ ಅಂಗಡಿಯೇ ಉಂಟಲ್ಲ ಎಂದು ಯೋಚಿಸುತ್ತಾ ಚಿನ್ನೂರಿನತ್ತ ಹೊರಟ.

★★★

ಆಡಲು ಹೋಗಿದ್ದ ಈರಿಯ ಆರು ವರ್ಷದ ಮಗ ಪುಟ್ಟ ಬಂದು ಅಮ್ಮ ಮಲಗಿದ್ದು ನೋಡಿ ಎರಡು ಸಾರಿ ಕರೆದು, ಏಳದಿದ್ದಾಗ ಏನೂ ತಿಳಿಯದೆ ಹೊರಗೆ ಬಂದು ರಸ್ತೆ ದಾಟಿ ಗೋವಿಂದನ ಅಂಗಡಿಯ ಬಳಿ ನಿಂತ. ಕತ್ತಲಾಗುತ್ತಿತ್ತು. ಅವನಿಗೆ ಹಸಿವೆಯಾಗುತ್ತಿತ್ತು. ಅಂಗಡಿಯಲ್ಲಿ ನೇತು ಹಾಕಿದ್ದ ಬಾಳೆ ಹಣ್ಣಿನ ಗೊನೆಯನ್ನೇ ಒಂದು ಹಣ್ಣು ಸಿಕ್ಕಿದ್ದರೆ ಎಂದು ಆಸೆಪಡುತ್ತಾ ನೋಡಿದ. ಅಮ್ಮನಿಗೆ ಎಚ್ಚರ ಇದ್ದಿದ್ದರೆ ದುಡ್ಡು ತಂದು ಒಂದು ತಿನ್ನಬಹುದಿತ್ತು. ಅವನು ಹಾಗೇ ನೋಡುತ್ತಿದ್ದಾಗ ತುಂಬಾ ಕಳಿತಿದ್ದ ಹಣ್ಣೊಂದು ಕಳಚಿ ನೆಲಕ್ಕೆ ಬಿತ್ತು. ಹಿಂದೆ ಮುಂದೆ ಯೋಚಿಸದೆ ಪುಟ್ಟ ಅದನ್ನು ಹಿಡಿದು, "ಏಯ್" ಎಂದು ಕೂಗುತ್ತಿದ್ದ ಗೋವಿಂದನ ಕೂಗಿಗೆ ಲಕ್ಷ್ಯ ಕೊಡದೆ ಮನೆಗೆ ಓಡಿ ಹೋದ. ''ಮನೆಹಾಳು ಬುದ್ಧಿ. ನಿನ್ನಪ್ಪ ಬರ್ಲಿ, ನಿಂಗೆ ಹದ ಹಾಕ್ತೀನಿ'' ಅಂತ ಗೋವಿಂದ ಕೂಗಿದ. ಮನೆಗೆ ಬಂದ ಪುಟ್ಟ ಅಮ್ಮ ಮಲಗಿದ್ದು ನೋಡಿ, ಬಾಳೆಹಣ್ಣು ತಿಂದು ಮತ್ತೇನೂ ಮಾಡಲು ತೋಚದೆ ಅವಳ ಪಕ್ಕ ತಾನೂ ಮಲಗಿದ.

ಇತ್ತ ಚಿನ್ನೂರಿನ ಹೆಂಡದಂಗಡಿಯಲ್ಲಿ ಕೂತು ಇನ್ನು ಕುಡಿಯಲಾಗುವುದಿಲ್ಲ ಎಂಬಷ್ಟು ಕುಡಿದು ಬೀರ ಜೇಬಿಂದ ದುಡ್ಡು ತೆಗೆದ. ಅವನ ಕೈಯಲ್ಲಿದ್ದ ದುಡ್ಡು ನೋಡಿ ಅಂಗಡಿಯ ಸೋಮಣ್ಣನಿಗೆ ಗಾಬರಿಯೂ ಅನುಮಾನವೂ ಆಯಿತು. ಬೀರನ ಬಳಿ ಎಂದೂ ಇಷ್ಟು ದುಡ್ಡು ನೋಡಿದವನೇ ಅಲ್ಲ ಅವನು. ''ಎಲ್ಲಿಂದ ಬಂತೋ ಇಷ್ಟು?'' ಎಂದು ಅವನು ಕೇಳಿದ್ದಕ್ಕೆ, ಹೆಂಡತಿ ಗೌಡರ ಮನೆಯಲ್ಲಿ ಕೂಲಿ ಮಾಡಿ ಸಂಪಾದಿಸಿದ ದುಡ್ಡು ಎಂದು ಹೇಳುವ ಬದಲು ಬೀರ, ಗೌಡ್ರು ಈರಿಗೆ ಕೊಟ್ಟಿದ್ದು ಅಂದುಬಿಟ್ಟ. ಸೋಮಣ್ಣನ ಕಣ್ಣು ಅಗಲವಾಯಿತು. ಅಲ್ಲೇ ಕುಡಿಯುತ್ತಿದ್ದ ಇನ್ನಿಬ್ಬರು ಕಿಸಕ್ಕೆಂದು ನಕ್ಕರು. ಆದರೆ, ಅವೆಲ್ಲ ಗಮನಿಸುವಷ್ಟು ಎಚ್ಚರ ಬೀರನಿಗೆ ಇದ್ದಿದ್ದರೆ ಅಂತಹ ಮಾತೇ ಅವನು ಆಡುತ್ತಿರಲಿಲ್ಲವಲ್ಲ!